# <u>ಕರ್ನಾಟಕ ಲೋಕಾಯುಕ್ತ</u>

ನಂ. ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್./1447/2021
ಪಿ.ಓ. ಎಆರ್‌ಇ–06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 22/12/2021.

## <u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ</u>

ವಿಷಯ: ಶ್ರೀ. ಶ್ರೀಧರ ಭಂಡಾರಿ ಬಿನ್ ಲೇಟ್ ರಾಮಯ್ಯ ಭಂಡಾರಿ, ಅಭಿವೃದ್ಧಿ ಅಧಿಕಾರಿ ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ದಕ್ಷಿಣ ಕನ್ನಡ ಜಿಲ್ಲೆರವರು ದುರ್ನಡತೆ/ದುರ್ವರ್ತನೆ ತೋರಿದ ಬಗ್ಗೆ.

******

1. ದಕ್ಷಿಣ ಕನ್ನಡ ಜಿಲ್ಲೆ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು, (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ಶ್ರೀಧರ ಭಂಡಾರಿ ಬಿನ್ ಲೇಟ್ ರಾಮಯ್ಯ ಭಂಡಾರಿ, ಅಭಿವೃದ್ಧಿ ಅಧಿಕಾರಿ ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ದಕ್ಷಿಣ ಕನ್ನಡ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಶರತ್ ಮೋವಿನ್ ಪಿಂಟೋ ಬಿನ್ ಲೇಟ್ ಕಾಶ್ಮೀರ್ ಪಿಂಟೋ, ವಾಸ: ಮೇಗಿನಬಲ್ಯ ಮನೆ, ಬರಿಮಾರು ಗ್ರಾಮ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ಸಂಬಂಧ ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :–**

i) ದೂರುದಾರರಾದ ಶ್ರೀ. ಶರತ್ ಮೋವಿನ್ ಪಿಂಟೋರವರ ಪತ್ನಿ ಶ್ರೀಮತಿ ವೈಲೆಟ್ ಮೊಂತೇರೊರವರು ಹಾಲು ಮಾರಾಟದ ಉದ್ಯಮ

ನಡೆಸಲು ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರಿಗೆ ನೀಡಲಾಗುವ ಉದ್ಯಮ ಸಬ್ಸಿಡಿಗೆ ಡಿಸೆಂಬರ್ 2018ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ದಿ:08/05/2019ರಂದು ಮಂಗಳೂರಿನ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕಛೇರಿಗೆ ದೂರುದಾರರು ಹೋದಾಗ ಅಲ್ಲಿನ ಸಿಬ್ಬಂದಿ ರಾಹಿಲ್ ಎಂಬುವರು ಸಬ್ಸಿಡಿ ಹಣದ ಒಂದು ಲಕ್ಷ ರೂ. ಚೆಕ್ ಕೊಡಬೇಕಾದರೆ ಮೇಲಾಧಿಕಾರಿಗಳಿಗೆ ಹತ್ತು ಸಾವಿರ ರೂ. ಲಂಚಕೊಡಬೇಕು, ಇಲ್ಲದೇ ಇದ್ದರೆ ಸಬ್ಸಿಡಿ ಫೈಲ್ ರಿಜೆಕ್ಟ್ ಆಗುತ್ತದೆ ಎಂದು ತಿಳಿಸಿರುತ್ತಾರೆ. ದಿ:10/05/2019ರಂದು ದೂರುದಾರರು ಪುನ: ಎದುರುದಾರರ ಕಛೇರಿಗೆ ಹೋಗಿ ಮಾತನಾಡಿದಾಗ ರಾಹಿಲ್ ಎಂಬ ಸಿಬ್ಬಂದಿ "ದೂರುದಾರರಿಗೆ ನಿಮ್ಮ ಹೆಂಡತಿಯ ಸಬ್ಸಿಡಿ ಚೆಕ್‌ಗೆ ಸಹಿ ಮಾಡಬೇಕಾದರೆ ಮೇಲಾಧಿಕಾರಿಗಳಿಗೆ ಹತ್ತು ಸಾವಿರ ರೂ. ಹಣ ಕೊಟ್ಟರೆ ಮಾತ್ರ ಸಹಿ ಮಾಡುತ್ತಾರೆ" ಎಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಆ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ಅಲ್ಲದೆ, ದೂರುದಾರರು ಹಣವನ್ನು ಕಡಿಮೆ ಮಾಡಿ ಎಂದು ಕೇಳಿದಾಗ ರಾಹಿಲ್‌ರವರು ಎದುರುದಾರರ ಬಳಿ ನೇರವಾಗಿ ಮಾತನಾಡಿ ಅವರು ಒಪ್ಪಿದರೆ ಹಣವನ್ನು ಅವರ ಕೈಯಲ್ಲಿ ಕೊಡಬಹುದು ಎಂದು ತಿಳಿಸಿರುತ್ತಾರೆ. ದೂರುದಾರರಿಗೆ ಲಂಚದ ಹಣಕೊಡಲು ಇಷ್ಟವಿಲ್ಲದೆ ಇದ್ದುದರಿಂದ ದೂರುದಾರರು ದಿ:21/05/2019ರಂದು ಭ್ರಷ್ಟಾಚಾರ ನಿಗ್ರಹ ದಳ ದಕ್ಷಿಣ ಕನ್ನಡ ಜಿಲ್ಲೆ ಆರಕ್ಷಕ ಉಪಾಧೀಕ್ಷಕರಿಗೆ ದೂರನ್ನು ಸಲ್ಲಿಸಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ದೂರನ್ನು ಪಡೆದು ಠಾಣೆಯ ಗುನ್ನೆ ನಂ.04/2019ರಲ್ಲಿ ಕಲಂ 7(ಎ), 12 ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿನಾಂಕ 21/05/2019ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಸಮಯದಲ್ಲಿ ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ ದೂರುದಾರರನ್ನು ಪರಿಚಯಿಸಿ, ಪಂಚರಿಗೆ ದೂರಿನ ಸಂಕ್ಷಿಪ್ತಮಾಹಿತಿಯನ್ನು ನೀಡಿದ ನಂತರ, ದೂರುದಾರರು ಎದುರುದಾರರ ಜೊತೆ ಮಾತನಾಡಿದಾಗ, ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲನ್ನು ತನಿಖಾಧಿಕಾರಿಗೆ ನೀಡಿದ್ದು, ತನಿಖಾಧಿಕಾರಿಯವರು ಸದರಿ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ನಂತರ ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ

ಲಿಪಿಕರಣಗೊಳಿಸಿ, ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಸಿ.ಡಿ.ಯನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ದೂರುದಾರರು ಎದುರುದಾರರಿಗೆ ಲಂಚದ ಹಣವಾಗಿ ಕೊಡಲು ತಂದಿದ್ದ 10,000/- ರೂ.ಗಳನ್ನು (2,000/- ರೂ. ಮುಖಬೆಲೆಯ 5 ನೋಟುಗಳು) ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ವಿವರಗಳನ್ನು ಪಂಚಸಾಕ್ಷಿ-1ರವರು ಪರಿಶೀಲಿಸಿ ಹೇಳಿದಂತೆ ಪಂಚಸಾಕ್ಷಿ-2ರವರು ನೋಟುಗಳ ವಿವರಗಳನ್ನು ಹಾಳೆಯಲ್ಲಿ ಮತ್ತು ಸಿಬ್ಬಂದಿ ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-1ರವರು ದೂರುದಾರರು ಧರಿಸಿದ್ದ ಶರ್ಟಿನ ಎಡಗಡೆಯ ಜೇಬಿನಲ್ಲಿ ಪುಡಿಲೇಪಿತ ಹಣವನ್ನು ಇಟ್ಟಿರುತ್ತಾರೆ.

iii) ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಬಳಿ ಹೋಗಿ ನಿಮ್ಮ ಕೆಲಸವಾದ ಸಬ್ಸಿಡಿಯ ಚೆಕ್ ನೀಡಲು ಕೇಳಿದಾಗ ಎದುರುದಾರರು ಲಂಚದ ಹಣ ಕೇಳಿದರೆ ಪುಡಿಲೇಪಿತ ನೋಟುಗಳನ್ನು ಕೊಟ್ಟು ಅವರು ಹಣವನ್ನು ಸ್ವೀಕರಿಸಿದರೆ, ನಂತರ ಹೊರಗಡೆ ಬಂದು ತಲೆಯನ್ನು ಕೈನಿಂದ ಸವರಿಕೊಳ್ಳುವ ಮೂಲಕ ಸನ್ನೆ ಮಾಡುವಂತೆ ಅಥವಾ ಪೊಲೀಸ್ ನಿರೀಕ್ಷಕರ ಮೊಬೈಲ್‌ಗೆ ಕರೆಮಾಡುವಂತೆ ಸೂಚನೆಯನ್ನು ನೀಡಿರುತ್ತಾರೆ. ದೂರುದಾರರಿಗೆ ಒಂದು ಧ್ವನಿಮುದ್ರಕವನ್ನು ನೀಡಿ ಎದುರುದಾರರ ಜೊತೆ ಮಾತನಾಡುವಾಗ ಚಾಲನಾ ಸ್ಥಿತಿಯಲ್ಲಿ ಇಟ್ಟುಕೊಳ್ಳುವಂತೆ ಮತ್ತು ಪಂಚಸಾಕ್ಷಿ-1 ನೆರಳುಸಾಕ್ಷಿಗೆ ದೂರುದಾರರ ಜೊತೆ ಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳು ಸಾಕ್ಷಿ ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iv) ದಿ: 21/05/2019ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಗಳು ಎದುರುದಾರರ ಕಛೇರಿ ಬಳಿ ಬಂದಿರುತ್ತಾರೆ. ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ ಎದುರುದಾರರ ಬಳಿ ಕಳುಹಿಸಿದ್ದು, ದೂರುದಾರರು ನೆರಳುಸಾಕ್ಷಿಯೊಂದಿಗೆ ಮೌಲಾನಾ ಆಜಾದ್ ಭವನದ 2ನೇ ಮಹಡಿಯಲ್ಲಿರುವ ಎದುರುದಾರರ ಕಚೇರಿಯ ಒಳಗೆ

ಬಂದು, ದೂರುದಾರರು ಅವರ ಕೆಲಸದ ಬಗ್ಗೆ ಮಾಡನಾಡಲು ರಾಹಿಲ್‌ನ ಟೇಬಲ್ ಬಳಿ ಹೋದಾಗ, ರಾಹಿಲ್ ಬೇರೆ ಫೈಲ್‌ನ ಕೆಲಸ ಮಾಡುತ್ತಿದ್ದ ಕಾರಣ, ದೂರುದಾರರು ಅಲ್ಲೇ ಇದ್ದ ರೋಹಿಣಿ ಎಂಬುವವರಲ್ಲಿ ರೇಷನ್ ಕಾರ್ಡ್ ಸ್ಕ್ಯಾನ್ ಮಾಡಲು ಇರುವುದಾಗಿ ತಿಳಿಸಿದ್ದು, ಆಗ ರಾಹಿಲ್ ಬಳಿ ಮಾತನಾಡಿ ಎಂದು ತಿಳಿಸಿದ ಮೇರೆಗೆ, ದೂರುದಾರರು ಮೊನ್ನೇನೆ ಅವರ ಬಳಿ ಮಾತನಾಡಿದ್ದೇನೆ ಎಂದು ಹೇಳಿ ದೂರುದಾರರು ಎದುರುದಾರರ ಚೇಂಬರ್ ಒಳಗಡೆ ಹೋಗಿ ಅವರ ಕೆಲಸದ ಬಗ್ಗೆ ಮಾತನಾಡಿದಾಗ ಎದುರುದಾರರು ಅದಕ್ಕೆ ತುಂಬಾ ಖರ್ಚಾಗುತ್ತದೆ, ಬೆಂಗಳೂರಿನಲ್ಲಿ ಹಣ ಕೊಡಲು ಇರುತ್ತದೆ, ಸುಮಾರು 7,500/- ರೂ. ಖರ್ಚಾಗುತ್ತೆ, ನೀವು ಎಷ್ಟು ಕೊಡುತ್ತೀರಿ? ಎಂದು ಕೇಳಿದ್ದು, ಆಗ ದೂರುದಾರರು ಸ್ವಲ್ಪ ಕಡಿಮೆಮಾಡಿಕೊಳ್ಳಿ, ಮೊನ್ನೆ ಬಂದಾಗ ರಾಹಿಲ್ ರವರು 10,000/- ರೂ. ಹೇಳಿದ್ದರೂ ಎಂದು ಹೇಳಿದಾಗ ಎದುರುದಾರರು ರಾಹಿಲ್‌ನನ್ನು ಅವರ ಚೇಂಬರ್‌ಗೆ ಕರೆಯಿಸಿ, ದೂರುದಾರರಿಗೆ "ಅವರಲ್ಲಿ 7,000/- ರೂ. ಕೊಡಿ" ಎಂದು ಹೇಳಿದ್ದು, ಆಗ ದೂರುದಾರರು ಅವರ ಬಳಿಯಿದ್ದ ಪುಡಿಲೇಪಿತ 10,000/- ರೂ. ನೋಟುಗಳಲ್ಲಿ 8,000/- ರೂ. ಹಣವನ್ನು ತೆಗೆದು ರಾಹಿಲ್‌ರವರಿಗೆ ಕೊಟ್ಟಿರುತ್ತಾರೆ. ಆಗ ರಾಹಿಲ್‌ರವರು 8,000/- ರೂ. ಗಳಲ್ಲಿ 1,000/- ರೂ. ಅನ್ನು ದೂರುದಾರರಿಗೆ ವಾಪಸ್ಸು ನೀಡಿರುತ್ತಾರೆ. ನಂತರ ದೂರುದಾರರು ಮತ್ತು ನೆರಳುಸಾಕ್ಷಿ ಹೊರಗಡೆ ಬಂದು ತನಿಖಾಧಿಕಾರಿಯವರ ಮೊಬೈಲ್‌ಗೆ ಕರೆಮಾಡಿ ಸೂಚನೆ ನೀಡಿರುತ್ತಾರೆ. ಆಗ ತನಿಖಾಧಿಕಾರಿ, ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ದೂರುದಾರರ ಬಳಿ ಬಂದಿದ್ದು, ದೂರುದಾರರು ತೋರಿಸಿದ ಎದುರುದಾರರನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದು ಅವರಿಗೆ ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ನಂತರ, ಛೇಂಬರ್ ಹೊರಗಡೆ ಇದ್ದ ಕಂಪ್ಯೂಟರ್ ಆಪರೇಟರ್ ರಾಹಿಲ್‌ನನ್ನು ದೂರುದಾರರು ತೋರಿಸಿ, ಇವರೇ ಲಂಚದ ಹಣವನ್ನು ಪಡೆದುಕೊಂಡಿರುತ್ತಾರೆಂದು ತಿಳಿಸಿದ ಮೇರೆಗೆ ತನಿಖಾಧಿಕಾರಿಯವರು, ರಾಹಿಲ್‌ನನ್ನು ವಶಕ್ಕೆ ಪಡೆದು ನಂತರ ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಆ ದ್ರಾವಣವನ್ನು ಎರಡು ಗಾಜಿನ ಬಟ್ಟಲುಗಳಲ್ಲಿ ತೆಗೆದುಕೊಂಡು ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ರಾಹಿಲ್‌ನ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ

ರಾಹಿಲ್‌ನ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ಎರಡೂ ದ್ರಾವಣಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಮತ್ತೆ ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಆ ದ್ರಾವಣವನ್ನು ಎರಡು ಗಾಜಿನ ಬಟ್ಟಲುಗಳಲ್ಲಿ ತೆಗೆದುಕೊಂಡು ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆದ ದ್ರಾವಣವನ್ನು ಒಂದು ಗಾಜಿನ ಬಾಟಲಿನಲ್ಲಿ ಶೇಖರಿಸಿ ವಶಕ್ಕೆ ಪಡೆದಿರುತ್ತಾರೆ. ಅದೇ ರೀತಿ ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆದ ದ್ರಾವಣವನ್ನು ಒಂದು ಗಾಜಿನ ಬಾಟಲಿನಲ್ಲಿ ಶೇಖರಿಸಿ ವಶಕ್ಕೆ ಪಡೆದಿರುತ್ತಾರೆ.

v) ತನಿಖಾಧಿಕಾರಿಯು ದೂರುದಾರರು ಕೊಟ್ಟಿದ್ದ ಲಂಚದ ಹಣವನ್ನು ಹಾಜರುಪಡಿಸುವಂತೆ ರಾಹಿಲ್‌ರವರಿಗೆ ಕೇಳಿದಾಗ, ರಾಹಿಲ್‌ರವರು ಸದರಿ ಹಣವನ್ನು ಅವರು ಕುಳಿತುಕೊಳ್ಳುವ ಟೇಬಲ್‌ನ ಡ್ರಾಯರ್‌ನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ ಮೇರೆಗೆ ಅದನ್ನು ತೆಗೆದುಕೊಡುವಂತೆ ತನಿಖಾಧಿಕಾರಿಯವರು ಹೇಳಿದಾಗ, ರಾಹಿಲ್ ರವರು ಅವರ ಟೇಬಲ್‌ನ ಡ್ರಾಯರ್‌ನಲ್ಲಿದ್ದ ಖಾಕಿ ಕವರನ್ನು ತೆಗೆದು ಹಾಜರುಪಡಿಸಿದ್ದು, ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚಸಾಕ್ಷಿ-1ರವರು ಕವರಿನಲ್ಲಿರುವ ಹಣವನ್ನು ಪರಿಶೀಲಿಸಿ ನೋಡಿದಾಗ ಅದರಲ್ಲಿ 2,000/- ರೂ. ಮುಖಬೆಲೆಯ 4 ನೋಟುಗಳಿದ್ದು ಮತ್ತು ಡ್ರಾಯರ್‌ನಲ್ಲಿ 2,000/- ರೂ. ಮುಖಬೆಲೆಯ ಒಂದು ನೋಟು ಮತ್ತು 500/- ರೂ. ಮುಖಬೆಲೆಯ 4 ನೋಟುಗಳು ಇದ್ದು, ಆ ನೋಟುಗಳಲ್ಲಿ 2,000/- ರೂ. ಮುಖಬೆಲೆಯ 4 ನೋಟುಗಳ ವಿವರಗಳು ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿದ ನೋಟುಗಳ ವಿವರಗಳಿಗೆ ತಾಳೆಯಾಗಿದ್ದರಿಂದ ಆ ನೋಟುಗಳನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ ಮತ್ತು ಡ್ರಾಯರ್‌ನಲ್ಲಿದ್ದ ಇತರೆ ಹಣದ ಬಗ್ಗೆ ತನಿಖಾಧಿಕಾರಿಯವರು ರಾಹಿಲ್‌ರವರಿಗೆ ಸಮಜಾಯಿಷಿ ಬರೆದುಕೊಡುವಂತೆ ಕೇಳಿದಾಗ, ರಾಹಿಲ್‌ರವರು ಅವರ ಸಮಜಾಯಿಷಿಯಲ್ಲಿ "ತನ್ನ ಡ್ರಾಯರ್‌ನಲ್ಲಿ 12,000/- ರೂ. ನಗದು ದೊರೆತಿದ್ದು, ಅದರಲ್ಲಿ ದೂರದಾರರ ಕೈಯಿಂದ ಪಡೆದುಕೊಂಡ 7,000/- ರೂ.ಗಳು ಮತ್ತು ಉಳಿದ 5,000/- ರೂ.ಗಳನ್ನು ದಿವ್ಯಕುಮಾರಿ ಕೆ.

ಕಲ್ಲುಗುಡ್ಡೆ ನೂಜಿಬಾಳ್ತಿಲ ಟೈಲರಿಂಗ್ ಫ್ಯಾನ್ಸಿ ಅಂಗಡಿ ವ್ಯಾಪಾರ ಉದ್ದೇಶಕ್ಕಾಗಿ ಸಲ್ಲಿಸಿದ್ದ ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ 66,000/- ರೂ. ಸಹಾಯಧನ ಚೆಕ್‌ನ್ನು ನೀಡಿದಾಗ ಅವರು ಸ್ವಂತ ಖುಷಿಯಿಂದ 5,000/- ರೂ. ನಗದು ಹಣವನ್ನು ನೀಡಿದ್ದು, ಅದನ್ನು ಡ್ರಾಯರ್‌ನಲ್ಲಿ ಇಟ್ಟಿದ್ದೇನೆ ಮತ್ತು ಪರ್ಸ್‌ನಲ್ಲಿ 5,535/- ರೂ. ಇರುವುದಾಗಿ ತಿಳಿಸಿ" ಸಮಜಾಯಿಷಿ ಬರೆದುಕೊಟ್ಟಿರುತ್ತಾರೆ. ಆ ಕಾರಣ ತನಿಖಾಧಿಕಾರಿಯವರು ಡ್ರಾಯರ್‌ನಲ್ಲಿದ್ದ 5,000/- ರೂ. ಹಣ ಲಂಚದ ಹಣವಾಗಿದ್ದರಿಂದ ಅದನ್ನು ವಶಪಡಿಸಿಕೊಂಡಿರುತ್ತಾರೆ. ಅದೇ ಸಮಯದಲ್ಲಿ ದೂರುದಾರರು ಮುಡಿಲೇಪಿತ 2,000/- ರೂ. ಮುಖಬೆಲೆಯ ಒಂದು ನೋಟನ್ನು ಮತ್ತು ರಾಹಿಲ್‌ರವರು ವಾಪಸ್ಸು ನೀಡಿದ 500/- ರೂ. ಮುಖಬೆಲೆಯ ಎರಡು ನೋಟುಗಳನ್ನು ಹಾಜರುಪಡಿಸಿದ್ದು, ಆ ನೋಟುಗಳನ್ನು ತನಿಖಾಧಿಕಾರಿಯವರು ಪ್ರತ್ಯೇಕವಾಗಿ ವಶಕ್ಕೆ ಪಡೆದಿರುತ್ತಾರೆ.

vi) ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ, ಎದುರುದಾರರು ಅವರ ಸಮಜಾಯಿಷಿಯಲ್ಲಿ "ಕಳೆದ ಒಂದು ವರ್ಷದಿಂದ ಜಿಲ್ಲಾ ವ್ಯವಸ್ಥಾಪಕರು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಕೆಲಸಮಾಡಿಕೊಂಡಿರುತ್ತೇನೆ. ದೂರುದಾರರು ಈ ದಿನ ಕಚೇರಿಗೆ ಬಂದಿದ್ದು, ಈ ಹಿಂದೆ ಅವರ ಪತ್ನಿ ಜೂನ್ 2018ರಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದು, ದೂರುದಾರರಾಗಲೀ ಅವರ ಪತ್ನಿಯಾಗಲೀ ಖುದ್ದಾಗಿ ಭೇಟಿಯಾಗಿಲ್ಲವೆಂದು ಮತ್ತು ಹಣದ ವ್ಯವಹಾರದ ಬಗ್ಗೆ ಮಾತನಾಡಲಿಲ್ಲವೆಂದು ಹಾಗೂ ಪ್ರಥಮ ಬಾರಿಗೆ ಕಚೇರಿಯಲ್ಲಿ ಖುದ್ದಾಗಿ ಭೇಟಿ ನೀಡಿರುತ್ತಾರೆ. ಉದ್ದೇಶಪೂರ್ವಕವಾಗಿ ಹಗರಣದಲ್ಲಿ ಸಿಕ್ಕಿಸಲು ಮಾಡಿರುವುದಾಗಿ ಕಂಡುಬರುತ್ತದೆ" ಎಂದು ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ಪಂಚಸಾಕ್ಷಿ ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಯವರು ರಾಹಿಲ್‌ರವರಿಗೆ ಸಮಜಾಯಿಷಿ ಬರೆದುಕೊಡುವಂತೆ ಕೇಳಿದಾಗ, ರಾಹಿಲ್‌ರವರು ಅವರ ಸಮಜಾಯಿಷಿಯಲ್ಲಿ "ಕಳೆದ 8 ತಿಂಗಳಿನಿಂದ ಕೆಲಸ ಮಾಡುತ್ತಿದ್ದು, ಎದುರುದಾರರು ತಿಂಗಳಿಗೆ 5,000/- ರೂ. ವೇತನ ನೀಡುತ್ತಿದ್ದು, ಕಚೇರಿಯಲ್ಲಿ ಕಂಪ್ಯೂಟರ್ ಕೆಲಸ ಮಾಡುತ್ತಿರುವುದಾಗಿ, ದೂರುದಾರರ ಪತ್ನಿ ವೃತ್ತಿ ಪ್ರೋತ್ಸಾಹ ಯೋಜನೆಗೆ ಅರ್ಜಿ ಹಾಕ್ಕಿದ್ದು, ಕಚೇರಿಗೆ

21/05/2019ರಂದು ಎದುರುದಾರರಲ್ಲಿ ಅರ್ಜಿಯ ಬಗ್ಗೆ ಮಾತನಾಡಿದ್ದು, ಅವರು ಹೇಳಿದ ಹಣವನ್ನು ನನ್ನಲ್ಲಿ ಕೊಡಲು ಹೇಳಿದ್ದರು. ಆದ್ದರಿಂದ ಹಣಕ್ಕೂ ತನಗೂ ಯಾವುದೇ ಸಂಬಂಧವಿಲ್ಲವೆಂದು" ಬರೆದುಕೊಟ್ಟಿರುತ್ತಾರೆ. ಎದುರುದಾರರ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ. ರಾಹಿಲ್‌ರವರು ನೀಡಿದ ಸಮಜಾಯಿಷಿಯನ್ನು ಒಪ್ಪಿರುತ್ತಾರೆ.

vii) ಟ್ರ್ಯಾಪ್ ಸಮಯದಲ್ಲಿ ದೂರುದಾರರ ಬಳಿಯಿದ್ದ ಧ್ವನಿಮುದ್ರಕದಲ್ಲಿ ಸಂಭಾಷಣೆಯು ಧ್ವನಿಮುದ್ರಿತವಾಗಿದ್ದು, ತನಿಖಾಧಿಕಾರಿಯು ಧ್ವನಿಮುದ್ರಕದಲ್ಲಿದ್ದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಲ್ಯಾಪ್‌ಟಾಪ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಆ ಸಿ.ಡಿ.ಯನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಎದುರುದಾರರ ಕಚೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ರೋಹಿಣಿಯವರು ಸಮಜಾಯಿಷಿಯನ್ನು ತನಿಖಾಧಿಕಾರಿಯವರಿಗೆ ಬರೆದುಕೊಟ್ಟಿದ್ದು ಸದರಿ ಸಮಜಾಯಿಷಿಯಲ್ಲಿ "ಎದುರುದಾರರ ಕಚೇರಿಯಲ್ಲಿ 5 ವರ್ಷಗಳಿಂದ ಕೆಲಸ ಮಾಡಿಕೊಂಡಿರುವುದಾಗಿ ದೂರುದಾರರು ರೇಷನ್ ಕಾರ್ಡ್ ಸ್ಕ್ಯಾನ್ ಮಾಡಲು ಇದೆ ಎಂದು ಹೇಳಿರುತ್ತಾರೆ ಮತ್ತು ವೃತ್ತಿ ಪ್ರೋತ್ಸಾಹ ಯೋಜನೆಯ ಬಗ್ಗೆ ಕೇಳಿರುತ್ತಾರೆ. ಅಮೌಂಟ್ ಬಗ್ಗೆ ಏನಾದರೂ ಹೇಳಿದ್ದಾರ ಎಂದು ಕೇಳಿರುತ್ತೇನೆ. ನಂತರ ಡಿ.ಎಂ. ಬಳಿ ಹೋಗಿರುತ್ತಾರೆ. ಸಾಧಾರಣವಾಗಿ ವ್ಯಕ್ತಿ ಪ್ರೋತ್ಸಾಹ ಯೋಜನೆ ಅಡಿ ರೂ. 1,00,000/- ಸಹಾಯಧನವಿದ್ದು, ಒಂದು ಫೈಲ್‌ಗೆ 10,000/- ರೂ. ಕೊಡಲು ಇದೆ ಎಂದು ಹೇಳಿರುತ್ತೇನೆ. ಈ ಹಣವನ್ನು ರಾಹಿಲ್‌ರವರು ಪಡೆದುಕೊಂಡು, ಎದುರುದಾರ-ಶ್ರೀ.ಡಿ.ಎಂ.ಶ್ರೀಧರ್ ಭಂಡಾರಿಯವರಿಗೆ ನೀಡಿರುತ್ತಾರೆ. ಈ ಹಣ ಕೊಡದಿದ್ದರೆ, ದೂರುದಾರರ ಫೈಲ್ ಕ್ಲಿಯರ್ ಆಗುವುದಿಲ್ಲ. ಈ ಫೈಲ್‌ಗಳನ್ನೆಲ್ಲಾ ರಾಹಿಲ್ ಚೆಕ್ ಮಾಡುತ್ತಿದ್ದು, ಅವರ ಕೈಯಲ್ಲಿ ಫೈಲ್ ಮತ್ತು ಹಣವನ್ನು ಮಾತನಾಡಿ ಎಂದು ಹೇಳಿದ್ದೆ" ಎಂದು ಬರೆದುಕೊಟ್ಟಿರುತ್ತಾರೆ. ನಂತರ ಎಲ್ಲರ ಸಮಕ್ಷಮ ಸವಿಸ್ತಾರ ಜಪ್ತಿ ಪಂಚನಾಮೆಯನ್ನು ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯು ಸಾಕ್ಷಿದಾರರ ಹೇಳಿಕ ತನಿಖಾ ದಾಖಲೆಗಳನ್ನು ಮತ್ತು ತಜ್ಞರ ವರದಿಯನ್ನು ಹಾಗೂ ಅಭಿಯೋಜನಾ

ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 16/10/2021 ರಂದು ಈ ಕಚೇರಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ 10 ವರ್ಷಗಳ ಕಾಲ ಪ್ರಭಾರ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ಮಾಡಿರುವುದಾಗಿ ಮತ್ತು ಪರಿವೀಕ್ಷಣಾ ಟಿಪ್ಪಣಿಯ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಅವರ ಸಮಜಾಯಿಷಿಯ ಪ್ಯಾರಾ-4 ರಲ್ಲಿ ದೂರುದಾರರ ಮತ್ತು ಅವರ ಪತ್ನಿ ಖುದ್ದಾಗಿ ಭೇಟಿಯಾಗಿಲ್ಲವೆಂದು ಹಾಗೂ ಹಣದ ವ್ಯವಹಾರದ ಬಗ್ಗೆ ಮಾತನಾಡಿಲ್ಲವೆಂದು, ದೂರುದಾರರು ಉದ್ದೇಶಪೂರ್ವಕವಾಗಿ ಯಾರದೋ ಚಿತಾವಣೆಯಿಂದಾಗಿ ಸುಳ್ಳು ಕೇಸನ್ನು ಹಾಕಿರುತ್ತಾರೆ, ತಾನು ಯಾವುದೇ ತಪ್ಪು ಮಾಡಿಲ್ಲವೆಂದು ಸಮಜಾಯಿಷಿಯಲ್ಲಿ ತಿಳಿಸಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯು ಸಮಂಜಸವಾಗಿರುವುದಿಲ್ಲ. ತನಿಖಾಧಿಕಾರಿಯು ಸಲ್ಲಿಸಿದ ದಾಖಲೆಗಳಿಂದ ಮತ್ತು ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಹಾಗೂ ಎದುರುದಾರರು ದಿನಾಂಕ 31/05/2019ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 214 (2)(ಬಿ)(1) ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಬೇಕೆಂದು ಕೋರಿ ಕರ್ನಾಟಕ

ಲೋಕಾಯುಕ್ತ ಕಾಯಿದೆ ಕಲಂ 12 (3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

22/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.